**ಸುಬ್ಬಿ:** ನಮ್ಮ ಎದುರುಗಡೆ ಮನೆಗೆ ಹೊಸದಾಗಿ ಬಂದಿರುವ ಗಂಡ ಹೆಂಡತಿ ಮೂರು ಹೊತ್ತೂ ಜಗಳ ಆಡ್ತಾನೇ ಇರ್ತಾರೆ. ಅದ್ಯಾವ ಸೀಮೆ ಸಂಸಾರ ಮಾಡ್ತಾರೋ ಏನೋ?

**ಗುಂಡ:** ಅದು ಹಾಗಲ್ಲ ಕಣೇ, ನೀನು ತಪ್ಪಾಗಿ ತಿಳಿದುಕೊಂಡಿದ್ದೀಯಾ!

**ಸುಬ್ಬಿ:** ಅಯ್ಯೋ, ಇಲ್ಲ ಕಣ್ರೀ! ಇಲ್ಲಿ ಬಂದು ನಿಂತುಕೊಂಡು ಸರಿಯಾಗಿ ಕೇಳಿಸಿಕೊಳ್ಳಿ!

**ಗುಂಡ:** ಛೆ.. ಛೇ ಪಾಪ! ಹಾಗಲ್ಲ ಕಣೆ, ಆಕೆ ಗಂಡ ಊರಲ್ಲಿ ಇಲ್ಲ! ಒಬ್ಬಳೇ ಇರೋಕೆ ಹೆದರಿಕೆ ಅಂತೆ. ಅದಕ್ಕೆ ಯಾವಾಗಲೋ ತನ್ನ ಗಂಡನ ಜೊತೆ ಆಡಿದ್ದ ಜಗಳವನ್ನು ಟೇಪ್ ರೆಕಾರ್ಡ್ ಮಾಡಿಕೊಂಡಿದ್ದಾಳೆ. ಈಗ ಒಬ್ಬಳೇ ಇರೋದ್ರಿಂದ ಅದನ್ನೇ ಮತ್ತೆ ಮತ್ತೆ ಹಾಕಿಕೊಂಡು ಕೇಳ್ತಾ ಇರ್ತಾಳೆ ಅಷ್ಟೇ ಕಣೆ!

***

**ಗುಂಡ:** ಲೇ, ನಾನು ಬರೆದ ಕಥೆ, ಕಾದಂಬರಿಗಳಿಗೆಲ್ಲಾ ಯಾವಾಗ ಬಹುಮಾನ, ಸನ್ಮಾನ ಸಿಗುತ್ತೋ ಕಾಣೆ!

**ಸುಬ್ಬಿ:** ಅಯ್ಯೋ ಅದಕ್ಕೆ ಯಾಕೆ ಯೋಚನೆ ಮಾಡ್ತೀರಿ ಬಿಡ್ರಿ!

**ಗುಂಡ:** ಏನು ಸಿಗುತ್ತೋ ಯಾವಾಗ ಸಿಗುತ್ತೋ? ಇಷ್ಟು ದಿನ ಸಹಿಸಿಕೊಂಡಿದ್ದೇ ಆಯ್ತು! ಹೋಗ್ಲಿ ಕಡೆಗೆ ಮರಣೋತ್ತರ ಪುರಸ್ಕಾರ ಸಿಕ್ಕಿದರೂ ಬರೆದದ್ದಕ್ಕೆ ಸಾರ್ಥಕ ಅಂದುಕೊಳ್ಳುತ್ತೇನೆ!

**ಸುಬ್ಬಿ:** (ಮರಣೋತ್ತರ ಎಂಬ ಪದದ ಅರ್ಥ ತಿಳಿಯದೆ) ಅಯ್ಯೋ ಬಿಡ್ರಿ, ಕೊರಗಬೇಡಿ, ಆದಷ್ಟು ಬೇಗನೆ ನಿಮಗೆ ಆ ಪುರಸ್ಕಾರವಾದರೂ ಸಿಗಲಿ ಅಂಥ ದೇವರಿಗೆ ತುಪ್ಪದ ಬತ್ತಿ ಹಚ್ಚುತ್ತೇನೆ!

***

**ಮರಿ ಗುಂಡ:** ಡ್ಯಾಡಿ, ಈ ಹೊಸ ನಾಯಿಗೆ ಎಷ್ಟು ಕೊಟ್ರೆ?

**ಗುಂಡ:** ಬರೀ ಒಂದು ಸಾವಿರ ರೂಪಾಯಿ.

ಮರಿ ಗುಂಡ: ಅದು ಸರಿ, ಆದರೆ ನಾಯಿ ತಗೊಳ್ಳಿ ಅಂತ ನಿಮಗೆ ದುಡ್ಡು ಕೊಟ್ಟವರು ಯಾರು?

**ಗುಂಡ:** ಇನ್ಯಾರು, ನಿಮ್ ಅಮ್ಮ ಸುಬ್ಬಿ ಕಣೋ. ಮನೇಲಿ ನೀನೇ ಇದೀಯಲ್ಲಾ ನಾಯಿ ಬೇರೆ ಯಾಕೇ ಅಂತ ಹೇಳಿದೆ, ಆದ್ರೂ ಕೇಳಲೇ ಇಲ್ಲ!

ಸಂಗ್ರಹ: ಆರ್. ವೀರೇಶ್ ಕುಮಾರ್, ಬೆಂಗಳೂರು




## ಐದೇ ಮಕ್ಕಳು

**ಕಂಡಕ್ಟರ್:** ಇವ್ರೆಲ್ಲಾ ಯಾರ್ ಮಕ್ಕಳು?

**ಗುಂಡ:** ನನ್ನವೇ ಸರ್. ಯಾಕ್ ಸರ್ ಟಿಕೆಟ್ ತಗೋಬೇಕಾ?

**ಕಂಡಕ್ಟರ್:** ಆರರ ಮೇಲಾದ್ರೆ ತಗೋಬೇಕು.

**ಗುಂಡ:** ಸದ್ಯ! ನನಗೆ ಐದೇ ಮಕ್ಕಳು. ಬಚಾವ್ ಆದೆ.

## ಸತ್ತ ಹುಲಿ

**ಗುಂಡ:** ಮೊನ್ನೆ ನಾನು ಕಾಡಿಗೆ ಹೋಗಿದ್ದಾಗ ಹುಲಿಯ ಕಾಲು ಕಡ್ಕೊಂಡು ಬಂದೆ!

**ಸೀನ:** ಭಯ ಆಗ್ಲಿಲ್ವಾ ನಿಂಗೆ?

**ಗುಂಡ:** ಇಲ್ಲ.

**ಸೀನ:** ಹಂಗಾದ್ರೆ ಅದರ ತಲೇನೇ ಕಡ್ಕೊಂಡು ಬಂದಿದ್ರೆ ಮತ್ತಷ್ಟು ಕ್ರೇಜ್ ಇರ್ತಿತ್ತು.

**ಗುಂಡ:** ತಲೇನೇ ಕಡ್ಕೊಂಡು ಬರೋಣ ಅಂತಿದ್ದೆ. ಆದರೆ ಮೊದಲೇ ಯಾರೋ ಕಡ್ಕೊಂಡು ಹೋಗಿದ್ರು.

## ಎದುರಾಡಬೇಡ

**ಅಪ್ಪ:** ಯಾಕೋ ಗುಂಡಾ, ಶಾಲೇಲಿ ಗುರುಗಳು ಕೇಳಿದ್ದಕ್ಕೆ ಉತ್ತರಾನೇ ಕೊಡಲ್ವಂತೆ?

**ಗುಂಡ:** ನೀನೇ ಹೇಳಿದ್ಯಲ್ಲಪ್ಪಾ ಅದಕ್ಕೆ...

**ಅಪ್ಪ:** ಏನೂಂತ ಹೇಳಿದ್ನೋ?

**ಗುಂಡ:** ಅದೇ ಅಪ್ಪಾ, ಗುರುಗಳ ಮಾತಿಗೆ ಎದುರಾಡ್ಬೇಡಾ ಅಂತ ಹೇಳಿದ್ಯಲ್ಲಪ್ಪಾ.

## ದೇವಸ್ಥಾನದಲ್ಲಿ

**ಸೀನ:** ನಮ್ ಹುಡ್ಗೀಗೆ ಎಲ್ಲಿ ಪ್ರೊಪೋಸ್ ಮಾಡ್ಲಿ?

**ಗುಂಡ:** ದೇವಸ್ಥಾನದಲ್ಲಿ ಮಾಡು.

**ಸೀನ:** ಯಾಕೆ?

**ಗುಂಡ:** ಚಪ್ಪಲಿ ಹೊರಗೆ ಬಿಟ್ಟಿರ್ತಾಳೆ ಅದಕ್ಕೆ.

## ಮುತ್ತಿನ ಏಟು

**ಅಮ್ಮ:** ಗುಂಡಾ, ಆಂಟಿ ಊರಿಗೆ ಹೊರಟಿದ್ದಾಳೆ, ಅವಳಿಗೊಂದು ಮುತ್ತು ಕೊಡು ಬಾ.

**ಗುಂಡ:** ಇಲ್ಲ ಅಮ್ಮ, ನಾನು ಕೊಡೋಲ್ಲಾ.

**ಅಮ್ಮ:** ಯಾಕೆ?

**ಗುಂಡ:** ನಿನ್ನೆ ರೂಂನಲ್ಲಿ ಅಪ್ಪ ಮುತ್ತು ಕೊಟ್ಟಿದ್ದಕ್ಕೆ ಆಂಟಿ ಕೆನ್ನೆಗೆ ಬಾರಿಸಿದ್ಲು. ಅದಕ್ಕೆ ನಾನು ಕೊಡೋಲ್ಲ.

ಸಂಗ್ರಹ: ಪ.ನಾ.ಹಳ್ಳಿ ಹರೀಶ್ ಕುಮಾರ್, ತುಮಕೂರು

SANDHILIN सन्धिलिन
ಸಂಧಿಲಿನ್
ಸಂಧಿಲಿನ್ ಹಚ್ಚಿ
ನೋವಿಗೆ ವಿದಾಯ ಹೇಳಿ!
ಶೀಘ್ರ ಪರಿಣಾಮಕಾರಿ




- ವಿವಿಧ ತರಹದ ನೋವಿಗೆ ಶೀಘ್ರ ಪರಿಣಾಮಕಾರಿ.
- ಕಳೆದ 14 ವರ್ಷಗಳಿಂದ ಲಕ್ಷಾಂತರ ಜನರ ಪ್ರಥಮ ಆಯ್ಕೆ.
- 'ಸಂಧಿಲಿನ್' ಲಿನಿಮೆಂಟ್‌ನ್ನು ಆಯುರ್ವೇದದ ಋಷಿಮುನಿ ಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು

SDM AYURVEDA PHARMACY

ISO / GMP CERTIFIED

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com

ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ.